# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1516 |
| ಸದಸ್ಯರ ಹೆಸರು | ಡಾ|| ಎಂ.ಜಿ.ಮುಳೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17.03.2026 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ವಿವಿಧ ಖನಿಜ ಗಣಿಗಾರಿಕೆ ಚಟುವಟಿಕೆಗಳಿಂದ ರಾಯಲ್ಟಿ (Royalty) ರೂಪದಲ್ಲಿ ಸಂಗ್ರಹವಾದ ಒಟ್ಟು ಆದಾಯ ಎಷ್ಟು; ವರ್ಷವಾರು ವಿವರವೇನು; ಕಳೆದ ವರ್ಷಕ್ಕೆ ಹೋಲಿಸಿದರೆ ಆದಾಯ ಸಂಗ್ರಹಣೆಯಲ್ಲಿ ಏರಿಕೆ ಅಥವಾ ಇಳಿಕೆ ಕಂಡಿದೆಯೇ;</td><td>ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ವಿವಿಧ ಖನಿಜ ಗಣಿಗಾರಿಕೆ ಚಟುವಟಿಕೆಗಳಿಂದ ರಾಯಲ್ಟಿ (Royalty) ರೂಪದಲ್ಲಿ ಸಂಗ್ರಹವಾದ ಒಟ್ಟು ಮೊತ್ತ ಈ ಕೆಳಗಿನಂತಿದೆ;
<table>
<tr><th>Sl. No</th><th>Year</th><th>Collection Amount (Crore)</th></tr>
<tr><td>1</td><td>2022-23</td><td>30.29</td></tr>
<tr><td>2</td><td>2023-24</td><td>18.73</td></tr>
<tr><td>3</td><td>2024-25</td><td>23.69</td></tr>
</table>
2023-24ನೇ ಸಾಲಿಗೆ ಹೋಲಿಸಿದರೆ 2024-25ನೇ ಸಾಲಿನಲ್ಲಿ ರಾಜಸ್ವ ಸಂಗ್ರಹಣೆ ಏರಿಕೆಯಾಗಿದೆ.</td></tr>
<tr><td>ಆ)</td><td>ಸಂಗ್ರಹವಾದ ರಾಯಲ್ಟಿ ಮೊತ್ತದಲ್ಲಿ District Mineral Foundation (DMF) ನಿಧಿಗೆ ಜಮೆಯಾದ ಮೊತ್ತ ಎಷ್ಟು; ಈ ನಿಧಿಯನ್ನು ಗಣಿಗಾರಿಕೆ ಬಾಧಿತ ಪ್ರದೇಶಗಳ ಕುಡಿಯುವ ನೀರು, ಶಿಕ್ಷಣ ಆರೋಗ್ಯ, ರಸ್ತೆ, ಸ್ವಚ್ಛತೆ ಹಾಗೂ ಇತರ ಮೂಲಸೌಕರ್ಯ ಅಬಿವೃದ್ಧಿ ಕಾರ್ಯಗಳಿಗೆ ಬಳಸಲಾಗಿದೆಯೇ; (ಯೋಜನಾವಾರು ಹಾಗೂ ವರ್ಷವಾರು ಮಾಹಿತಿ ನೀಡುವುದು)</td><td>ಸಂಗ್ರಹವಾದ ರಾಯಲ್ಟಿ ಮೊತ್ತದಲ್ಲಿ, ಬೀದರ್ ಜಿಲ್ಲಾ ಖನಿಜಾ ಪ್ರತಿಷ್ಠಾನ ಟ್ರಸ್ಟ್ ನ ಅಡಿಯಲ್ಲಿ 2022-23 ರಿಂದ 2025-26ರಲ್ಲಿ (ಜನವರಿ ಅಂತ್ಯದವರೆಗೆ) ರೂ.4.89 ಕೋಟಿ ಡಿ ಎಂ ಎಫ್ ಮೊತ್ತ ಸಂಗ್ರಹವಾಗಿದ್ದು, ಈ ಮೊತ್ತದಲ್ಲಿ ಗಣಿಗಾರಿಕೆ ಬಾಧಿತ ಪ್ರದೇಶಗಳ ಕುಡಿಯುವ ನೀರು, ಶಿಕ್ಷಣ ಆರೋಗ್ಯ, ರಸ್ತೆ, ಸ್ವಚ್ಛತೆ ಹಾಗೂ ಇತರೆ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳಿಗೆ ಬಳಸಲಾಗಿದ್ದು, ಯೋಜನಾವಾರು ಹಾಗೂ ವರ್ಷವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ.</td></tr>
<tr><td>ಇ)</td><td>ಬೀದರ ಜಿಲ್ಲೆಯಲ್ಲಿ ಲಭ್ಯವಿರುವ ಖನಿಜ ಸಂಪನ್ಮೂಲಗಳಾದ ಕೆಂಪು ಕಲ್ಲು (Laterite) ಮರಳು ಹಾಗೂ ಇತರೆ ಸಣ್ಣ ಖನಿಜಗಳ ವೈಜ್ಞಾನಿಕ ಸಮೀಕ್ಷೆ (Geological Survey) ಕೊನೆಯದಾಗಿ ಯಾವ ವರ್ಷದಲ್ಲಿ ನಡೆಸಲಾಗಿದೆ; ಹೊಸ ಗಣಿ ಗುತ್ತಿಗೆ (Mining lease / Quarry License) ನೀಡಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳು ಮತ್ತು ಪರಿಸರ ಅನುಮೋದನೆಯ ಪ್ರಕ್ರಿಯೆಯ ವಿವರವೇನು;</td><td>• ಬೀದರ್ ಜಿಲ್ಲೆಯಲ್ಲಿ ಮುಖ್ಯ ಖನಿಜ ನಿಕ್ಷೇಪ ತೆಗೆಯಲು ಯಾವುದೇ ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಿರುವುದಿಲ್ಲ.<br>• ಜಿಲ್ಲೆಯಲ್ಲಿ ಉತ್ತಮ ಗುಣಮಟ್ಟದ ಮರಳು ಲಭ್ಯವಿಲ್ಲದ ಕಾರಣ ಮರಳು ನಿಕ್ಷೇಪ / ಬ್ಲಾಕ್‌ಗಳನ್ನು ಗುರುತಿಸಿಲ್ಲ.<br>• 2024-25ನೇ ಸಾಲಿನಲ್ಲಿ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆಯು (Geological Survey of India) ಬೀದರ ಜಿಲ್ಲೆಯ ವಿವಿಧ ತಾಲ್ಲೂಕುಗಳ, ವಿವಿಧ ಪ್ರದೇಶಗಳಲ್ಲಿ ಸರ್ವೆಯನ್ನು (Laterite Sample collections in surface and Profile sections) ನಡೆಸಿರುತ್ತಾರೆ.<br>• 2025-26ನೇ ಸಾಲಿನಲ್ಲಿ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆಯು (Geological Survey of India) ಬೀದರ ಜಿಲ್ಲೆಯ ಕರಕನಳ್ಳಿ ಬ್ಲಾಕ್ ವ್ಯಾಪ್ತಿಯಲ್ಲಿ ಲ್ಯಾಟರೈಟ್ ರಾಕ್ಸ್ (Laterite Rocks) ಪ್ರದೇಶಗಳಲ್ಲಿ ಸರ್ವೆಯನ್ನು (Critical Mineral Assessment Programme for Scandium) (Code:M2A-CMAP/NC/SR/SU-KG/2025/65658) ಕೈಗೊಂಡಿರುತ್ತಾರೆ.<br>• ಮುಖ್ಯ ಖನಿಜಗಳ ಸಂಬಂಧ ಲಭ್ಯತೆ ದೃಢಪಟ್ಟಿರುವ ಪ್ರದೇಶಗಳಲ್ಲಿ ಎಂಎಂಡಿಆರ್ ತಿದ್ದುಪಡಿ ಕಾಯ್ದೆ, 2015ರ ಕಲಂ-10(B) ರಡಿಯಲ್ಲಿ ಹರಾಜು ಮೂಲಕ ಗಣಿಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.</td></tr>
</table>

. . . 2

- ಖನಿಜ ಲಭ್ಯತೆ ದೃಢಪಡದ ಪ್ರದೇಶಗಳಲ್ಲಿ ಎಂಎಂಡಿಆರ್ ತಿದ್ದುಪಡಿ ಕಾಯ್ದೆ, 2015ರ ಕಲಂ-11 ರಡಿಯಲ್ಲಿ ಸಂಯುಕ್ತ ಪರವಾನಗಿ **(Composite Licence) (Prospecting-cum-Mining Lease)**ನ್ನು ಸದರಿ ಕಾಯ್ದೆಯಡಿ ರೂಪಿಸಲಾದ **Mineral (Auction) Rules, 2015**ರ ನಿಯಮ-9(4) ಮತ್ತು 10 ರಂತೆ ಹರಾಜು ಮಾಡಿ ಯಶಸ್ವಿಯಾದ ಬಿಡ್‌ದಾರರನ್ನು ಪರಿಗಣಿಸಿದ ನಂತರ **The Mineral (Auction) Rules, 2015** ಮತ್ತು **Mineral (Other Than Atomic and Hydro Carbons Energy Minerals) Concession Rules 2016**ರಡಿ ಗಣಿಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.
- ಎಂ.ಎಂ. (ಡಿ & ಆರ್) 1957ರ ಸೆಕ್ಷನ್-15ರಂತೆ ರಾಜ್ಯ ಸರ್ಕಾರಗಳಿಗೆ ನೀಡಿರುವ ಅಧಿಕಾರದನ್ವಯ ರಾಜ್ಯದಲ್ಲಿ ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆ ಮಂಜೂರಾತಿ ನಿಯಂತ್ರಣ ಕುರಿತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ನ್ನು ಜಾರಿಗೆ ತರಲಾಗಿದ್ದು, ಸದರಿ ನಿಯಮಗಳಂತೆ ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆಗಳನ್ನು ಪಡೆಯುವುದು ಕಡ್ಡಾಯವಾಗಿದೆ.
- ಸರ್ಕಾರಿ ಜಮೀನುಗಳಲ್ಲಿ ಲಭ್ಯವಿರುವ ಉಪಖನಿಜ ನಿಕ್ಷೇಪಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಗುರುತಿಸಿ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದ ನಂತರ ಅಧಿಸೂಚನೆ ಜಾರಿ ಮಾಡಬೇಕಾಗಿದ್ದು, ನಂತರ ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ಗುರುತಿಸಿರುವ ಉಪಖನಿಜದ ನಿಕ್ಷೇಪದ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಟೆಂಡರ್ ಕಂ ಹರಾಜು ಪ್ರಕ್ರಿಯೆ ಕೈಗೊಂಡು ನಿರ್ದಿಷ್ಟ ಉಪಖನಿಜಗಳಿಗೆ ಸರ್ಕಾರದಿಂದ ಮತ್ತು ನಿರ್ದಿಷ್ಟವಲ್ಲದ ಉಪಖನಿಜಗಳಿಗೆ ಸಂಬಂಧಿಸಿದಂತೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರಿಂದ ಬಿಡ್ ಸ್ವೀಕರಿಸಿಕೊಂಡ ನಂತರ ಯಶಸ್ವಿ ಬಿಡ್‌ದಾರರಿಂದ ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಗುತ್ತಿಗೆಯನ್ನು ಮಂಜೂರು ಮಾಡಲಾಗುತ್ತದೆ.
- ದಿನಾಂಕ:17-03-2023ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2023ನ್ನು ಜಾರಿಗೆ ತಂದಿದ್ದು, ದಿನಾಂಕ:12-08-2016ರ ಪೂರ್ವದಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ಪರಿಗಣಿಸಲಾಗಿದ್ದು, ಸದರಿ ಅರ್ಜಿಗಳ ಪ್ರದೇಶಕ್ಕೆ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದ ನಂತರ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಕ್ರಮವಹಿಸಬೇಕಾಗಿದೆ.
- ಪಟ್ಟಾ ಜಮೀನುಗಳಲ್ಲಿ ಉಪಖನಿಜಗಳ ಗಣಿಗಾರಿಕೆಗೆ ಪಟ್ಟಾದಾರರಿಗೆ ಅಥವಾ ಪಟ್ಟಾದಾರರು ಒಪ್ಪಿಗೆ ನೀಡುವ ವ್ಯಕ್ತಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ, ಭೂಪರಿವರ್ತನೆ ಆದೇಶ, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿ ರವರಿಂದ ಕಲ್ಲುಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗುತ್ತಿದೆ.
- ಗಣಿಗುತ್ತಿಗೆಗಳನ್ನು **Mineral (Other Than Atomic and Hydro Carbons Energy Minerals) Concession Rules 2016** ರ **Schedule-VII** ರಂತೆ ಮತ್ತು ಕಲ್ಲುಗಣಿ ಗುತ್ತಿಗೆಗಳನ್ನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಮೂನೆ-ಇ ರಲ್ಲಿನ ಗುತ್ತಿಗೆ ಕರಾರು, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರದಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ನೀಡಲಾಗುತ್ತಿದೆ.
- ಉಪ ಖನಿಜಗಳ ಗಣಿ ಗುತ್ತಿಗೆ ಮಂಜೂರಾತಿಗೆ ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ **(SEIAA)**ಕ್ಕೆ ಅನುಮೋದಿತ ಕ್ವಾರಿ ಪ್ಲಾನ್ ಹಾಗೂ ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದಿಂದ ನಿಗದಿಪಡಿಸಿರುವ ತಂಡಪಟ್ಟಿಯಲ್ಲಿ ಅರ್ಜಿಗಳನ್ನು ಸಲ್ಲಿಸಿ, ಯೋಜನೆ ಪ್ರತಿಪಾದಕರು ಪರಿಸರ ಅನುಮತಿ ಪತ್ರ ಪಡೆಯಬೇಕಾಗಿದೆ.

. . . 3

<table>
<tr>
<td>ಈ)</td>
<td>ಗಣಿಗಾರಿಕೆಯಿಂದ ಹಾನಿಗೊಳಗಾದ ಪ್ರದೇಶದಲ್ಲಿ ಪರಿಸರ ಸಮತೋಲನ ಕಾಯ್ದುಕೊಳ್ಳಲು ಪರಿಸರ ಮರುಸ್ಥಾಪನೆ (Reclamation / Afforestation) ಕಾರ್ಯಗಳನ್ನು ಕೈಗೊಳ್ಳಲಾಗಿದೆಯೆ; ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಗಿಡ ನೆಡುವ ಕಾರ್ಯನಡೆದಿದೆ; ಖನಿಜ ಗುತ್ತಿಗೆದಾರರಿಂದ CSR ಅಥವಾ ಪರಿಸರ ಪರಿಹಾರ ನಿಧಿ ಬಳಕೆಯಾದ ಪ್ರಮಾಣ ಎಷ್ಟು;</td>
<td>ಬೀದರ ಜಿಲ್ಲೆಯಲ್ಲಿ ಗಣಿಗಾರಿಕೆಯಿಂದ ಹಾನಿಗೊಳಗಾದ ಪ್ರದೇಶದಲ್ಲಿ ಪರಿಸರ ಸಮತೋಲನ ಕಾಯ್ದುಕೊಳ್ಳಲು, ಪರಿಸರ ಮರುಸ್ಥಾಪನೆ (Reclamation / Afforestation) ಕಾರ್ಯಗಳನ್ನು ಕೈಗೊಳ್ಳಲು ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಕ್ರಿಯಾ ಯೋಜನೆ ರೂಪಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ.</td>
</tr>
<tr>
<td>ಉ)</td>
<td>ಬೀದರ ಜಿಲ್ಲೆಯಲ್ಲಿ ನಡೆಯುತ್ತಿರುವ ಅಕ್ರಮ ಖನಿಜ ಗಣಿಗಾರಿಕೆ ಹಾಗೂ ಅಕ್ರಮ ಸಾಗಾಣೆ ತಡೆಯಲು ವಿಶೇಷ ತಪಾಸಣಾ ದಳಗಳು (Task Force / Check Posts) ಕಾರ್ಯನಿರ್ವಹಿಸುತ್ತಿವೆಯೆ; ಕಳೆದ ಎರಡು ವರ್ಷಗಳಲ್ಲಿ ದಾಖಲಾಗಿರುವ ಅಕ್ರಮ ಪ್ರಕರಣಗಳ ಸಂಖ್ಯೆ ಎಷ್ಟು; ವಶಪಡಿಸಿಕೊಂಡ ದಂಡದ ಮೊತ್ತ ಮತ್ತು ವಶಪಡಿಸಿಕೊಂಡ ವಾಹನಗಳ ಸಂಖ್ಯೆ ಎಷ್ಟು?</td>
<td>ಅಕ್ರಮ ಖನಿಜ ಗಣಿಗಾರಿಕೆ ಹಾಗೂ ಅಕ್‌ರಮ ಸಾಗಾಣೆ ತಡೆಯಲು ವಿಶೇಷ ತಪಾಸಣಾ ದಳ (Task Force / Check Posts) ಗಳ ಮೂಲಕ ಕಳೆದ 02 ವರ್ಷಗಳಲ್ಲಿ ಬೀದರ್ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಉಪಖನಿಜ ಗಣಿ ಚಟುವಟಿಕೆಗಳ ನಿಯಂತ್ರಣಕ್ಕಾಗಿ ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿ ಹಾಗೂ ಜಿಲ್ಲಾ ಮರಳು ಸಮಿತಿಯಿಂದ ಎಂ.ಎಂ. (ಡಿ & ಆರ್) ಕಾಯ್ದೆ -1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿದೆ.
<table>
<tr><th>ವರ್ಷ</th><th>ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ</th><th>ವಿಧಿಸಿರುವ ದಂಡದ ಮೊತ್ತ (ರೂ.ಲಕ್ಷಗಳಲ್ಲಿ)</th><th>ಧಾಖಲಿಸಿದ ಮೊಕದ್ದಮೆಗಳ ಸಂಖ್ಯೆ</th></tr>
<tr><td>2024-25</td><td>188</td><td>46.90</td><td>6</td></tr>
<tr><td>2025-26</td><td>246</td><td>39.17</td><td>5</td></tr>
<tr><td>ಒಟ್ಟು</td><td>434</td><td>86.07</td><td>11</td></tr>
</table>
</td>
</tr>
</table>

ಸಂಖ್ಯೆ:ಸಿಐ-ಎಂಎಂಎನ್/132/2026

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

ಅನುಬಂಧ

## ಬೀದರ್ ಜಿಲ್ಲಾ ಖನಿಜಾ ಪ್ರತಿಷ್ಠಾನ ಟ್ರಸ್ಟ್ ನ ಅಡಿಯಲ್ಲಿ ಯೋಜನಾವಾರು ಹಾಗೂ ವರ್ಷವಾರು ಕೈಗೊಂಡ ಕಾಮಗಾರಿಗಳ ವಿವರ.

ರೂ ಲಕ್ಷಗಳಲ್ಲಿ

| Sl. No | district | block/Taluk | Project Name | project_sanction_date | amount_sanctioned (in lakhs) | priority | sector | project_status | financial_year | no_of_beneficiaries | Vidhan Sabha Kshetra |
|---|---|---|---|---|---|---|---|---|---|---|---|
| 1 | Bidar | Bidar | Pipe line from MNREGA open wall to over head tank wia Kasturibai Gandhi school at Mudabi village | 08-08-2018 | 7.44 | High Priority | Drinking water supply | Yet to start | 2018-19 | 800 | Basavakalyan |
| 2 | Bidar | Bidar | Providing of pipeline and pumping mission from Laldhari tanda to Kallur village at Laldhari thanda | 08-08-2018 | 6.00 | High Priority | Drinking water supply | Yet to start | 2018-19 | 950 | Humnabad |
| 3 | Bidar | Bidar | Providing of Mess to the Open well at government high school | 08-08-2018 | 1.00 | High Priority | Drinking water supply | Yet to start | 2018-19 | 50 | Humnabad |
| 4 | Bidar | Bidar | Constructing of new Angawadi building at Mudabi village (SC Colony) | 08-08-2018 | 8.33 | High Priority | Education | Yet to start | 2018-19 | 35 | Basavakalyan |
| 5 | Bidar | Bidar | Constructing of New Angawadi building at Kallur village | 08-08-2018 | 2.00 | High Priority | Education | Yet to start | 2018-19 | 85 | Humnabad |
| 6 | Bidar | Bidar | Supply desk Almara and sports equipments to Govt Highschool Kallur village | 08-08-2018 | 3.00 | High Priority | Education | Yet to start | 2018-19 | 45 | Humnabad |
| 7 | Bidar | Bidar | Construction of compound to veternery hospital at Kallur | 08-08-2018 | 2.00 | Other Priority | Physical infrastructure | Yet to start | 2018-19 | 55 | Humnabad |
| 8 | Bidar | Bidar | Improvement of road to Adarsh Govt School from main road at Janwada village | 08-08-2018 | 16.50 | Other Priority | Physical infrastructure | Yet to start | 2018-19 | 275 | Bidar (North) |
| 9 | Bidar | Bidar | Providing solar LED Lamps at Kallur Village | 08-08-2018 | 1.50 | Other Priority | Physical infrastructure | Yet to start | 2018-19 | 470 | Humnabad |
| Total | | | | | 47.77 | | | | | | |

ನೋಡಲ್ ಅಧಿಕಾರಿಗಳು ಡಿ ಎಂ ಎಫ್